ದವರು ಈ ಕಳ್ಳ ವ್ಯವಹಾರದಲ್ಲಿ ತೊಡಗಿದ್ದಾರೆ ಅಂದರೆ ಆ ಕೋಷ್ಠು ಯಾವುದು ? ಅಧಿಕಾರಿಗಳ ಕೋಷ್ಠೆ ? ಅಥವಾ ಸಾರ್ವಜನಿಕರು ಇದರಲ್ಲಿ ಭಾಗಿಗಳಾಗಿದ್ದಾರೆಯೇ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಈ ವ್ಯವಹಾರದಲ್ಲಿ ತೊಡಗಿರುವ ಮತ್ತು ಕಳ್ಳಸಾಗಾಣಿಕೆಯನ್ನು ಪ್ರೋತ್ಸಾಹಿಸುತ್ತಿರುವ ಕೆಲವು ಜನರು ಇದ್ದಾರೆ. ಅದನ್ನೆಲ್ಲಾ ನಾನು ಡಿಮ್ಯಾಂಡ್‌ಗಳಿಗೆ ಉತ್ತರ ಕೊಡುವ ಸಂದರ್ಭದಲ್ಲಿ ಎಲ್ಲವನ್ನೂ ಹೇಳುತ್ತೇನೆ. ಈಗ ಬೇಡ.....

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸದಸ್ಯರು ಬಹಳ ಉತ್ತಮವಾದಂಥ ವಿಚಾರದ ಮೇಲೆ ಬೆಳಕು ಚೆಲ್ಲಿದ್ದಾರೆ. ಇದೊಂದು ಗುರುತರವಾದುಂಥ ಪ್ರಶ್ನೆಯಾಗಿದೆ. ದಯವಿಟ್ಟು ಮಾನ್ಯ ಸಚಿವರು ಈ ಕಳ್ಳಸಾಗಾಣಿಕೆಯನ್ನು ಮಾಡುವ ವ್ಯವಹಾರದಲ್ಲಿ ಯಾರ್ಯಾರು ಇದ್ದಾರೆ ಅವರನ್ನು ಅವರ ಹೆಸರನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಸಚಿವರು ಮೂಡಿಗೆರೆ ತಾಲ್ಲೂಕಿಗೆ ದೊಡ್ಡ ಅಪಮಾನವನ್ನು ಮಾಡಿದ್ದಾರೆ. ೧೧೮ ಕೆ. ಜಿ. ಶ್ರೀಗಂಧದ ಮರವನ್ನು ಹಿಡಿದಿದ್ದಾರೆ ಎಂದು ಹೇಳಿದ್ದಾರೆ. ಅದು ಬಹುಶಃ ೧೧೮ ಟನ್ ಇರಬಹುದು. ಏಕೆಂದರೆ ಗಂಧದ ಕಾಡಿನ ಪ್ರದೇಶದಲ್ಲಿ ೧೧೮ ಕೆ. ಜಿ. ಅಂದರೆ ಆ ಭಾಗಕ್ಕೆ ಒಂದು ರೀತಿಯಲ್ಲಿ ಅಪಮಾನವಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವುದು ನಿಜವಾಗಿದೆ. ಗಂಧದ ಕಳ್ಳಸಾಗಾಣಿಕೆ ಬೇಕಾದಷ್ಟು ಆಗುತ್ತಿದೆ. ಜಾಸ್ತಿಯಾಗುತ್ತಿದೆ. ಆದರೆ ನಮ್ಮ ಅಧಿಕಾರಿಗಳು ನಾಮಕಾವಾಸ್ತೆಗೆ ಕೊಟ್ಟಿದ್ದಾರೆ. ನಮ್ಮ ಅಧಿಕಾರಿಗಳನ್ನು ಕೊಟ್ಟಿದ್ದನ್ನು ನಾನು ಒಪ್ಪುತ್ತಾ ಇಲ್ಲ. ಒಟ್ಟಿನಲ್ಲಿ ಈ ಅವ್ಯವಹಾರಕ್ಕೆ ಪ್ರತಿಬಂಧಕ ಹಾಕಬೇಕು. ಅದನ್ನು ತಮ್ಮೆಲ್ಲರ ಸಹಕಾರದಿಂದ ಮಾಡಬೇಕಾಗಿದೆ ಅದನ್ನು ಮಾಡೋಣ. ನಾನಂತೂ ಇದನ್ನು ಮುಂದುವರಿಯುವುದಕ್ಕೆ ಬಿಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ದಯವಿಟ್ಟು ಆ ಕೆಲಸವನ್ನು ತಾವುಗಳು ಮಾಡಬೇಕು, ತಮಗೆ ಆ ದಿಸೆಯಲ್ಲಿ ಈ ಸಭೆಯು ಇತಿಯಿಂದ ಎಷ್ಟು ಅಧಿಕಾರ ಬೇಕೋ ಅದನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ.

ಶ್ರೀಮತಿ ಮೋಟಮ್ಮ.—ನಮ್ಮ ಭಾಗದ ಡಿವೈಎಸ್‌ಪಿ ರವರನ್ನು ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಕಳುಹಿಸಿದ್ದಾರೆ. ಆದರೆ ಅವರಿಲ್ಲದೇ ಅಲ್ಲಿ ಬೇಕಾದಷ್ಟು ಜನ ವೀರಪ್ಪನ್‌ಗಳು ಹುಟ್ಟಿಕೊಂಡಿದ್ದು ಇಲ್ಲಿ ಕಳ್ಳಸಾಗಾಣಿಕೆ ಮುಂತಾದ ವ್ಯವಹಾರಗಳಲ್ಲಿ ತೊಡಗಿದ್ದಾರೆ. ಇದು ದಿನೇ ದಿನೇ ಜಾಸ್ತಿಯಾಗುತ್ತಾ ಇದೆ. ಇವರನ್ನು ಮಾರು ಹೇಗೆಯುತ್ತಾರೆ ?

ಉಪಾಧ್ಯಕ್ಷರು.—ಈಗಾಗಲೇ ಅವರು ಇದಕ್ಕೆ ಉತ್ತರ ಹೇಳಿದ್ದಾರೆ.

ಬೀಡಿ ಕಟ್ಟುವ ಜನರಿಗೆ ಬೇಕಾದಷ್ಟು ಕೆಲಸವಿಲ್ಲದೆ ಉಂಟಾದ ಗಂಭೀರ ಪರಿಸ್ಥಿತಿ ಬಗ್ಗೆ

ಶ್ರೀ ರಮಾನಾಥ ರೈ.—ಮಾನ್ಯ ಉಪಾಧ್ಯಕ್ಷರೆ, ಬೀಡಿ ಕಟ್ಟುವ ಜನರಿಗೆ ಬೇಕಾದಷ್ಟು ಕೆಲಸ ಇಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದೆ. ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಉದ್ಯಮವು ಒಂದು ವ್ಯಾಪಾರಿ ಉದ್ಯಮವಾಗಿದ್ದು, ಬಹಳಷ್ಟು ಜನ ಈ ಉದ್ದಿಮೆಯನ್ನು ಕಾಯ್ದೆ ಜಿ.ಎಸ್.ಓ.ಪಾಯಕ್ಕೆ ಅಳವಡಿಸಿರುತ್ತಾರೆ. ಇವರಿಗೆ ಕೆಲಸವಿಲ್ಲದೆ ಗಂಭೀರ ಪರಿಸ್ಥಿತಿ ಉಂಟಾಗಲು ಬಹಳಷ್ಟು ಕಾರಣಗಳಿವೆ. ಮೊದಲನೆಯದಾಗಿ ರಚ್ಚಾ ಪದಾರ್ಥಗಳ ಕೊರತೆ ಇರುವುದರಿಂದ, ಮತ್ತು ಸಂಘ ಪ್ರದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದ ಬೀಡಿ ಎಲೆಗಳನ್ನು ರಾಷ್ಟ್ರೀಕರಣ ಮಾಡಿ ಅಲ್ಲಿನ ಬೀಡಿ ಎಲೆಯ ಮೇಲೆ ಮಾರಾಟದ ರಫ್ತು ದರ

ವನ್ನು ಹೆಚ್ಚಿಸಿರುವುದರಿಂದ ಹಾಗೂ ರಾಜ್ಯ ಸರ್ಕಾರ ರಫ್ತಾಗಿ ಬರುವ ಬೀಡಿ ಎಲೆಗಳ ಮೇಲೆ ಪ್ರವೇಶ ತೆರಿಗೆ ವಿಧಿಸಿರುವುದರಿಂದ ಬೀಡಿ ಎಲೆಗಳು ಸಾಕಷ್ಟು ಸಿಗದೆ ಬೀಡಿ ಕಾರ್ಮಿಕರಿಗೆ ಕೆಲಸವಿಲ್ಲದಂತಾಗಿದೆ.

ಈ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಲು ಈಗಾಗಲೇ ಅಲ್ಲಿಯ ಜಿಲ್ಲಾಧಿಕಾರಿಗಳು ಹಾಗೂ ಸಹಾಯಕ ಕಾರ್ಮಿಕ ಆಯುಕ್ತರು ಬೀಡಿ ಕಾರ್ಮಿಕ ಸಂಘದ ಪ್ರತಿನಿಧಿಗಳು ಮತ್ತು ಉದ್ದಿಮೆದಾರ ಪ್ರತಿನಿಧಿಗಳ ನಡುವೆ ಜಂಟಿ ಸಭೆಗಳನ್ನು ಕರೆದು ಚರ್ಚಿಸಲಾಗುತ್ತಿದೆ. ಮತ್ತು ಈ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಲು ಸರ್ವ ಪ್ರಯತ್ನ ನಡೆಸಲಾಗುತ್ತಿದೆ.

ಬೀಡಿ ಕಾರ್ಮಿಕರಿಗೆ ಸಾಕಷ್ಟು ಕೆಲಸ ದೊರಕಿಸುವ ಬಗ್ಗೆ ಭಾರತ ಸರ್ಕಾರದೊಂದಿಗೆ ತೆರಿಗೆ ರಿಯಾಯಿತಿ ನೀಡುವ ಬಗ್ಗೆ ವ್ಯವಹರಿಸಲಾಗುತ್ತಿದೆ. ಮತ್ತು ವ್ಯವಸ್ಥಾಪಕ ನಿರ್ದೇಶಕರು ಮೈಸೂರ್ ಫಾರೆಸ್ಟ್ ಪ್ರೊಡ್ಯೂಸ್, ಭೂಪಾಲ್ ಇವರೊಂದಿಗೆ ಕರ್ನಾಟಕಕ್ಕೆ ಆಕ್ಟಿ ಹೆಚ್ಚಿನ ಬೀಡಿ ಎಲೆಗಳನ್ನು ಸರಬರಾಜು ಮಾಡುವಂತೆಯೂ ಸಹ ಕೋರಲಾಗಿದೆ. ಬಹುಶಃ ಈ ದಿಸೆಯಲ್ಲಿ ಭಾರತ ಸರ್ಕಾರದವರು ಕರ್ನಾಟಕ ಸರ್ಕಾರಕ್ಕೆ ಸಂಪೂರ್ಣ ಸಹಾಯವನ್ನು ಒದಗಿಸುವಲ್ಲಿ ಮುಂದೆ ಬಂದರೆ ದಕ್ಷಿಣ ಕನ್ನಡ ಜಿಲ್ಲೆಯ ಬಹುತೇಕ ಎಲ್ಲಾ ಬೀಡಿ ಕಾರ್ಮಿಕರ ಸಮಸ್ಯೆಯು ಬಗೆಹರಿಯುವುದರಲ್ಲಿ ಸಂದೇಹವಿಲ್ಲ.

ಶ್ರೀ ಬಿ. ರಮಾನಾಥ ರೈ.—ಮಾನ್ಯ ಉಪಾಧ್ಯಕ್ಷೀಣಿಯವರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಉದ್ದಿಮೆ ಒಂದು ಪ್ರಮುಖವಾದುದು. ಐ ಲಕ್ಷಕ್ಕಿಂತ ಹೆಚ್ಚು ಕುಟುಂಬಗಳು ಇದರಿಂದ ಜೀವನ ನಡೆಸುತ್ತಿವೆ. ಈ ಜನರಿಗೆ ಮಾನ್ಯ ಸಚಿವರು ಹೇಳಿದಂತೆ ಬಹಳಷ್ಟು ಕಾರಣಗಳಿಂದ ವಾರದಲ್ಲಿ ಎರಡು ಮೂರು ದಿವಸ ಸರಿಯಾಗಿ ಕೆಲಸ ಸಿಗದ ಪರಿಸ್ಥಿತಿ ನಿರ್ಮಾಣವಾಗಿ ದಕ್ಷಿಣ ಕನ್ನಡದ ಆರ್ಥಿಕ ವ್ಯವಸ್ಥೆ ಮೇಲೆ ದುಷ್ಪರಿಣಾಮವಾಗಿದೆ. ಬೀಡಿ ಕಟ್ಟಲು ಬೇಕಾದ ತಂದು ಎಲೆಗಳನ್ನು ಒರಿಸ್ಸಾ, ಆಂಧ್ರ ಮಹಾರಾಷ್ಟ್ರದ ಕೆಲವು ಭಾಗ ಮತ್ತು ಮಧ್ಯಪ್ರದೇಶದಲ್ಲಿ ವಿಶೇಷವಾಗಿ ಬೆಳೆಯುತ್ತಿದ್ದು ಹಿಂದೆ ಕಡಿಮೆ ದರದಲ್ಲಿ ಸಿಗುತ್ತಿತ್ತು. ಆದರೆ ಮಧ್ಯಪ್ರದೇಶ ಸರ್ಕಾರ ಆದಿವಾಸಿಗಳಿಗೆ ನ್ಯಾಯ ಕೊಡುವುದಕ್ಕಾಗಿ ಮತ್ತು ಮಧ್ಯವರ್ತಿಗಳ ಶೋಷಣೆ ತಪ್ಪಿಸಲೆಂದು ಎಲೆ ಉತ್ಪಾದನೆಯನ್ನು ಅಲ್ಲಿ ರಾಷ್ಟ್ರೀಕರಣ ಮಾಡಿದ್ದರಿಂದ ಇಲ್ಲಿ ಶಾರ್ಟೇಜ್ ಬಂತು. ಇದರಿಂದಾಗಿ ೧೦ ರೂ ಇದ್ದ ಬೆಲೆ ೪೦ ರೂ ಗಳಿಗೆ ಏರಿತು. ಇದರಿಂದ ಎಲೆ ಸಿಗುತ್ತಿಲ್ಲ ಇದರಿಂದಾಗಿ ಬೀಡಿ ಕಾರ್ಮಿಕರಿಗೆ ಕೆಲಸ ಸಿಗುತ್ತಿಲ್ಲವಾಗಿ ತೊಂದರೆಯಲ್ಲಿದ್ದಾರೆ, ಒಂದು ಊಟಕ್ಕೂ ತೊಂದರೆಯಾಗುವ ಪರಿಸ್ಥಿತಿ ಉಂಟಾಗಿದೆ. ನಮ್ಮ ಸರ್ಕಾರ ಇದಕ್ಕೆ ಒಂದು ಕಾರ್ಯಕ್ರಮ ಹಾಕಿಕೊಂಡು ನಮ್ಮ ಜಿಲ್ಲೆಗೆ ಹೆಚ್ಚಿನ ಎಲೆ ಒದಗಿಸುವ ಕಾರ್ಯ ಮಾಡಬೇಕು. ಜೊತೆಗೆ ಕಚ್ಚಾವಸ್ತುಗಳಿಗೆ ಎಂಟ್ರಿಟ್ಯಾಕ್ಸ್ ಏನು ಹಾಕಲಾಗುತ್ತಿದೆ, ಅದನ್ನು ಕಡಿಮೆ ಮಾಡಿದರೆ ಬೀಡಿ ಉದ್ಯಮಕ್ಕೆ ಒಳ್ಳೆಯದಾಗುವುದು. ಮತ್ತು ಬೀಡಿ ಮಾಲೀಕರನ್ನು ಮಾನ್ಯ ಸಚಿವರು ಕರೆಸಿ ಅಲ್ಲಿನ ವಿಚಾರ ತಿಳಿದುಕೊಂಡು ಕಾರ್ಮಿಕ ನಾಯಕರನ್ನು ಸಹ ಕರೆಸಿ ಅವರ ನಿಜವಾದ ಸಮಸ್ಯೆಯನ್ನು ಅರಿತುಕೊಂಡು ಆ ಸಮಸ್ಯೆಗಳನ್ನು ಪರಿಹಾರ ಮಾಡಲು ಪ್ರಯತ್ನಿಸಬೇಕೆಂದು ಕಾರ್ಮಿಕರ ಸಚಿವರನ್ನು ಕೋರುತ್ತೇನೆ.

ಶ್ರೀ ಕೆ. ಪೆಚ್. ಪಾಟೀಲ್ (ಕಾರ್ಮಿಕ ಸಚಿವರು).—ಬೀಡಿ ಎಲೆ ಹೆಚ್ಚಿನ್ನರಿಂದ ಬೇಕಾದಷ್ಟು ಬೀಡಿ ಕಟ್ಟಿದ್ದು ಗೋಡೋನ್‌ನಲ್ಲಿ ಉಳಿದಿದೆ. ಮತ್ತು ಖರ್ಚಾಗುವುದು ಕಡಿಮೆಯಾಗಿದೆ ಏಕೆಂದರೆ ಬೇರೆ ರಾಜ್ಯದ ಬೀಡಿ ಬೆಲೆ ಕಡಿಮೆ ಇಲ್ಲಿನದು ಜಾಸ್ತಿ. ಆಮೇಲೆ ಎಂಟ್ರಿ ಟ್ಯಾಕ್ಸ್‌ನ ಆಗಲಿ, ಸೇಲ್ಸ್ ಟ್ಯಾಕ್ಸ್ ಆಗಲಿ, ಎಕ್ಸೈಜ್ ಟ್ಯಾಕ್ಸ್ ಆಗಲಿ, ತೆಗೆದು ಹಾಕುವ ಬಗ್ಗೆ ನನ್ನ ಕೈಲಾದದ್ದನ್ನು ಮಾಡುತ್ತೇನೆ ಅದು ಎಷ್ಟರ ಮಟ್ಟಿಗೆ ಸಾಧ್ಯ ಆಗುತ್ತದೋ ನನಗೆ ಗೊತ್ತಿಲ್ಲ, ಮತ್ತು ಬೀಡಿ ಕಾರ್ಮಿಕರು ಕೆಲಸವಿಲ್ಲದೆ ಇದ್ದರೆ ಅವರನ್ನು ಕೆಲಸಕ್ಕೆ ಹಚ್ಚುವ ದೃಷ್ಟಿಯಿಂದ ತ್ವರಿತ ರೀತಿಯಿಂದ ಈ ಕೆಲಸವನ್ನು ಮಾಡುತ್ತೇವೆ. ಇನ್ನು ಬೀಡಿಯನ್ನು ಖರೀದಿ ಮಾಡಿ ವ್ಯವಹಾರ ಮಾಡಲು ಸಹ ಸಾಧ್ಯವಿಲ್ಲ ಏಕೆಂದರೆ ಬೀಡಿ ಸೇದಿರಿ ಸೇದಿರಿ ಎಂದು ಕ್ಯಾನ್‌ವಾಸ್ ಮಾಡಲು ಸಹ ಸಾಧ್ಯವಿಲ್ಲವೆಂಬುದು ಸಹ ತಮಗೆ ಗೊತ್ತಿದೆ. ಆದ್ದರಿಂದ ಸೇದುವವರ ಸಲುವಾಗಿ ಎಷ್ಟು ಸೌಕರ್ಯಗಳನ್ನು ಒದಗಿಸಬೇಕೋ ಅಷ್ಟು ಒದಗಿಸುತ್ತೇವೆ.

ಶ್ರೀ ಕೆ. ಸೋಮಪ್ಪ ಸುವರ್ಣ.—ಮಾನ್ಯ ಉಪಾಧ್ಯಕ್ಷೀಣಿಯವರೇ, ನಮ್ಮ ಜಿಲ್ಲೆ ಇಂದು ಬೀಡಿ ಎಲೆ, ಹೊಗೆಸೊಪ್ಪು ಇಲ್ಲದೇ, ಇಂದು ಹೊರ ರಾಜ್ಯದಿಂದ ಬರತಕ್ಕಂಥ ಬೀಡಿ ಎಲೆಯೂ ಇಲ್ಲದೆ, ನಮ್ಮ ಜನರು ಬಹಳ ಕಂಗಾಲಾಗಿದ್ದಾರೆ. ನಿಮ್ಮನ್ನು ಬುದ್ಧಿವಂತ ಜನರು ಎಂದು ಹೇಳಿಕೊಂಡಿದ್ದೀರಿ. ಅದಕ್ಕೆ ನಮ್ಮ ಬುದ್ಧಿ ಈಗ ನಮ್ಮ ಭಾಷೆಯಲ್ಲಿ ಹೇಳುವುದಾದರೆ ' ಮಂತೆ ' ಯಾಗಿದೆ. ನಮ್ಮ ತುಳು ಭಾಷೆಯಲ್ಲಿ ' ಮಂತೆ ' ಎಂದು ಹೇಳಿದರೆ ಅದು ಕಡಿಮೆ ಎಂದು ಅರ್ಥ. ಆ ಪರಿಸ್ಥಿತಿಗೆ

ಬಂದಿದೆ. ನಮ್ಮ ಕಷ್ಟಕ್ಕೆ ಸರ್ಕಾರ ಕೊಡುತ್ತಿರುವಂಥ ಸಹಾಯ ಏನೇನು ಸಾಲದು. ಏಕೆಂದರೆ ಹೇಳಿದರೆ ಈಗ ಬೀಡಿ ಎಲೆ ಬರುವುದಿಲ್ಲ ಅಂದರೆ ಅದನ್ನು ತರಿಸಿ ಅದಕ್ಕೆ ಸಬ್ಸಿಡಿಯನ್ನು ಕೊಟ್ಟು ನಮ್ಮ ಜನರಿಗೆ ಉದ್ಯೋಗ ಕೊಡಬೇಕು. ಹೊಗೆಸೊಪ್ಪು ಇಲ್ಲದಿದ್ದರೆ ಅದಕ್ಕೆ ಸಬ್ಸಿಡಿಯನ್ನು ಕೊಟ್ಟು ಬೀಡಿ ಕಟ್ಟುವಂಥ ಉದ್ಯಮವನ್ನು ಬೆಳೆಸಬೇಕು. ಬೀಡಿಯ ಧಾರಣೆ ಹೆಚ್ಚಾಗಿದ್ದರೆ ಅದನ್ನು ಕಡಿಮೆ ಮಾಡುವಂಥ ಎಂಟ್ರಿ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್ ಕಡಿಮೆ ಮಾಡಬೇಕು. ಏನೋ ಡಿ. ಸಿ. ಯವರ ನೇತೃತ್ವದಲ್ಲಿ ಕಮಿಟಿ ಮಾಡಿದೆ ಎಂದು ಹೇಳಿದರೆ ಕಳೆದ ಆರು ತಿಂಗಳಿಂದ ಉಪವಾಸ ಬೀಳುತ್ತಿರುವಂಥ ನಮ್ಮ ಜನರು ಹೊಟ್ಟೆಗೆ ಬಟ್ಟೆ ಕಟ್ಟಿ ಕಾಳಿತುಕೊಳ್ಳುವ ಪ್ರಮೇಯವನ್ನು ದಯಮಾಡಿ ತರಬೇಡಿ. ಈಗಾಗಲೇ ಬುದ್ಧಿವಂತರು ಬುದ್ಧಿವಂತರು ಎಂದು ನಮ್ಮನ್ನು ಹೇಳಿನಮ್ಮನ್ನು ಬಡಕರಾಗಿ ಮಾಡಿ ಬಿಟ್ಟಿದ್ದೀರಿ. ದಯಮಾಡಿ ನಮ್ಮ ಕಡೆಗೆ ಕಣ್ಣು ಹರಿಸಿರಿ.ಆ ಕಡೆಗೆ ಮುಖ್ಯವಾಗಿ ಹಣದ ಸಹಾಯವನ್ನು ಮಾಡಿ,ಸೇಲ್ಸ್ ಟ್ಯಾಕ್ಸ್ ತೆಗೆಯಿರಿ,ಎಂಟ್ರಿ ಟ್ಯಾಕ್ಸ್ ಬಿಟ್ಟು ಬಿಡಿ. ಹಾಗಾದರೆ ನಾವು ಬದುಕುತ್ತೇವೆ. ನಮ್ಮ ಜನರು ಬದುಕುತ್ತಾರೆ. ಇಲ್ಲದಿದ್ದರೆ ನಮ್ಮ ಜಿಲ್ಲೆಯಲ್ಲಿ ನಾವು ಉಳಿದುಕೊಳ್ಳುವುದಕ್ಕೆ ಸಾಧ್ಯ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ ದಯಮಾಡಿ ನಮ್ಮನ್ನು ರಕ್ಷಿಸಿರಿ ಎಂದು ಕೇಳುತ್ತೇನೆ.

ಶ್ರೀ ಕೆ. ಪಿಚ್. ಪಾಟೀಲ್.—ಮಾನ್ಯ ಉಪಾಧ್ಯಕ್ಷಣಿಯವರೇ, ನಾನು ಟೀಕೆ ಮಾಡುವುದಿಲ್ಲ. ಮಂಗಳೂರು ಜಿಲ್ಲೆಯ ಜನರು ಬುದ್ಧಿವಂತರು ಎಂದು ನಾನು ಹೇಳಿಲ್ಲ ಅದನ್ನು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದಾರೆ. ಆ ರೀತಿ ನಡೆದಿರುವುದು ವಾಸ್ತವ ಸಂಗತಿ. ಬುದ್ಧಿವಂತರಿಗೆ ಸೌಲಭ್ಯಗಳನ್ನು ಕೊಡಬಾರದು ಎಂದು ನಾವೇನೂ ಹೇಳುವುದಿಲ್ಲ. ಯಾವ ರೀತಿಯ ಸೌಲಭ್ಯಗಳನ್ನು ಕೊಡಲಿಕ್ಕೆ ಸಾಧ್ಯವಿದೆಯೋ ಅದನ್ನು ಕೊಡುತ್ತೇವೆ. ಇನ್ನೂ ಹೆಚ್ಚಿಗೆ ಕೊಡುತ್ತೇವೆ. ಏಕೆಂದರೆ ಬುದ್ಧಿವಂತರು ಇದ್ದಲ್ಲಿ ಹತ್ತು ಮಕ್ಕಳಿಗೆ ಅನುಕೂಲವಾಗುತ್ತದೆ. ಇವರಿಗೆ ಉದ್ಯೋಗ ನೀತಿಯಲ್ಲಿ ಸರ್ಕಾರ ಹೆಚ್ಚು ಸೌಲಭ್ಯಗಳನ್ನು ತೋರಿಸುತ್ತದೆ. ಈ ರೀತಿಯಾಗಿ ಮಂಗಳೂರಿಗೆ ಹೆಚ್ಚು ಸೌಲಭ್ಯಗಳು ಸಿಕ್ಕಿದರೆ ನಾನೇನೂ ಹೊಟ್ಟೆ ಕಿಚ್ಚು ಪಡುವುದಿಲ್ಲ

† SRI BLASIUS M. DISOUZA.—Madam Speaker, We have been speeking about the Beedi workers. There are about six lakh Beedi workers working in South Kanara due to the high cost of beedi leaves and as beedi leaves are not available, today, the manufacturers are not able to manufacture beedies through out the year. As a result of this from six days the work has come to four days today. Most of the workers have to depend upon the beedi rolling, As the hon'ble Minister said this is the entry tax, when the raw material comes to the city they charge 2 percent entry tax, when the raw materials are given to the workers to roll the beedies theyagain charge entry tax and finally when the finished goods are sold and send to the towns they again charge entry tax forthe third time. Therefore, I don't think it requires lot of efforts to cancel this entry tax on beedies. Because of this entry tax the cost of production has gone up and today the workers are suffering, I would request the hon'ble Minister to see that immediately some relief is given to the beedi workers and the manufacturers and at the same time to have a contract with the Madhya Pradesh Government Bhopal. We require about 15 lakh bundles of leaves, each bundle containing about 40 kgs of beedi leaves and this year due to the heavy rains and floods in Madhya Pradesh I am afraid that we will not be able to get these leaves. Because there what we

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

have heard is that neither workers have been able to collect leaves intime, nor the leaves are tied up and ready for sale to the manufacturers. I would request the hon'ble Minister to go into the details and see that some relief is given to the beedi manufac. turers so that more and more relief is given to the beedi rollers-

SRI K. H. PATIL. Madam, my Department is aware of all the difficulties that have been envisaged by the hon'ble members. I quite agree with their views. My humble duty is to present it before the Finance Minister to reduce the tax, I cannot assure this house whether the tax can be reduced or not. But on their behalf I will advocate the cause before the Finance Minister and see that what best could be done in the matter, In the meanwhile I am also approaching the Madhya Pradesh Government to see that as far as possible beedi leaves are sent to us out of the notionalised quota.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿದೇಶಿ ಏಜೆಂಟ್‌ರಿಂದ ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಆಗುತ್ತಿರುವ ವಂಚನೆ

೧೧.೦೦ ಎ.ಎಂ.

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಉಪಾಧ್ಯಕ್ಷಣಿಯವರೇ, ನಿನ್ನೆ ಮೊನ್ನೆಯಿಂದ ವಿಂಡ್ಸರ್ ಮ್ಯಾನರ್ ಹೋಟೆಲ್‌ನಲ್ಲಿಬಂದು ತರಬೇತಿ ಕೇಂದ್ರವನ್ನು ವಿದೇಶಿಏಜೆಂಟ್‌ರು ತೆರೆದು ಹೊರದೇಶದಲ್ಲಿ ಜಾಬ್ ಓರಿಯೆಂಟೆಡ್ ಕೋರ್ಸ್ ಅನ್ನು ನಿಮಗೆ ಕೊಡಿಸಿಕೊಡುತ್ತೇನೆ ಎಂದು ವಿದ್ಯಾರ್ಥಿಗಳಿಗೆ ಹೇಳಿ ವಂಚನೆ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ. ಆತನ ಹೆಸರು ಫಿಶ್ ಬ್ಯಾಕ್ ಎಂದು ಆತ ವಿದೇಶಿ ಪ್ರಜೆ. ಆಸ್ಟ್ರೇಲಿಯಾ, ಕೆನಡಾ, ಯು ಕೆ ಇತ್ಯಾದಿ ಹೊರದೇಶ ಗಳಲ್ಲಿ ಹೆಚ್ಚು ಹೆಚ್ಚು ವಿದ್ಯಾಭ್ಯಾಸ ಮಾಡಲಿಕ್ಕೆ ಅವಕಾಶ ಮಾಡಿಸಿಕೊಡುತ್ತೇನೆ ಎಂದು ಹೇಳಿಕೊಂಡು ಅಲ್ಲಿ ನೆಲಸಿದ್ದಾನೆ. ಇದೇ ಪ್ರಜೆ ೧೯೮೬ನೇ ಇಸವಿಯಲ್ಲಿ ಮದ್ರಾಸ್‌ನ ಒಂದು ಫೈವ್ ಸ್ಟಾರ್ ಹೋ ಟೆಲ್‌ನಲ್ಲಿ ತಂಗಿ ಇದೇ ರೀತಿ ಪ್ರಚಾರ ಮಾಡಿ ಹೆಚ್ಚು ಎಜುಕೇಶನ್ ಕೊಡಿಸುತ್ತೇನೆಂದು ಹೇಳಿ ಹಲವಾರು ವಿದ್ಯಾರ್ಥಿಗಳನ್ನು ಕರೆದಿದ್ದಾನೆ. ಅವನ ಮಾತಿನಂತೆ ಚಿನ್ನರಾಯಪಟ್ಟಣದ ಒಬ್ಬ ವಿದ್ಯಾರ್ಥಿ ೧೯೮೬ನೇ ಇಸವಿಯಲ್ಲಿ ಆಸ್ಟ್ರೇಲಿಯಾಕ್ಕೆ ಹೋಗಿದ್ದ. ಅಲ್ಲಿಗೆ ಹೋಗಿ ನೋಡಿದಾಗ ಅದು ಎಡೆಡ್ ಇನ್‌ಸ್ಟಿಟ್ಯೂಷನ್ ಆಗಿರಲಿಲ್ಲ. ಮೂರು ವರ್ಷಗಳ ಕಾಲ ಕಾಲೇಜು ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿ ಯಾವುದೇ ಸರ್ಟಿಫಿಕೇಟ್ ಸಿಗದೇ ಇರತಕ್ಕ ಸಂದರ್ಭದಲ್ಲಿ ಅಲ್ಲಿನ ಜನರ ಸಹಕಾರ ತೆಗೆದುಕೊಂಡು ಆಸ್ಟ್ರೇಲಿಯಾದ ಕೋರ್ಟಿಗೆ ಅರ್ಜಿ ಹಾಕಿದ ಆಸ್ಟ್ರೇಲಿಯಾದ ಕೋರ್ಟ್ ತೀರ್ಮಾನ ಕೊಟ್ಟಿದೆ. ಆ ಹುಡಗನಿಗೆ ಅನ್ಯಾಯ ಆಗಿದೆ. ಈ ಇನ್‌ಸ್ಟಿಟ್ಯೂಷನ್ ಅನ್ಯಾಯ ಮಾಡಿದೆ ಎಂದು ಹೇಳಿ ೩೦೫೭ ಡಾಲರ್ ದುಡ್ಡು ಆ ವಿದ್ಯಾರ್ಥಿಗೆ ಕೊಡಬೇಕೆಂದು ಹೇಳಿದೆ. ಈಗ ಏನು ಆಗಿದೆ ಎಂದರೆ, ನಿನ್ನೆಯಿಂದ ಸುಮಾರು ಐನೂರು, ಸಾವಿರಾರು ವಿದ್ಯಾರ್ಥಿಗಳು ಆ ಒಂದು ತರಗತಿಯಲ್ಲಿ ಕುಳಿತಿದ್ದಾರೆ. ಈ ರೀತಿ ಹುಡಗರಿಗೆ ಆಗಿರತಕ್ಕ ಅನ್ಯಾಯ ಮುಂದಿನ ಪೀಳಿಗೆಗೆ ಆಗಬಾರದು. ಇದಕ್ಕೆ ದಯವಿಟ್ಟು ಸಂಬಂಧ ಪಟ್ಟ ಇಲಾಖೆಯವರು ಇದನ್ನು ಪರಿಶೀಲನೆ ಮಾಡಿ ಈ ಸದನಕ್ಕೆ ತಿಳಿಸಬೇಕು. ಆತ ಎನು ಮಾಡುತ್ತಿದಾನೆ, ಎಂದು ತಿಳಿಸಬೇಕು. ಕೇಂದ್ರ ಸರ್ಕಾರದವರು ಏನಾದರೂ ಪರವಾನಗಿ ಇದಕ್ಕೆ ಕೊಟ್ಟಿದೆಯೇ ಅಥವಾ ರಾಜ್ಯ ಸರ್ಕಾರದವರು ಪರವಾನಗಿ ಕೊಟ್ಟಿದೆಯೇ ಈ ರೀತಿ ವಿದ್ಯಾರ್ಥಿಗಳಿಗೆ ಮೋಸ ಆಗುತ್ತಾ ಇರತಕ್ಕದ್ದರ ಬಗ್ಗೆ ಮತ್ತು ವಿದೇಶಿ ಜಾಲವನ್ನು ಪತ್ತೆ ಹಚ್ಚುವುದರಲ್ಲಿ ಸರ್ಕಾರ ಜಾಗ್ರತೆ ಆಗಬೇಕು ಎಂದು ಹೇಳುತ್ತೇನೆ.

ಉಪಾಧ್ಯಕ್ಷರು.—ಸಂಬಂಧಪಟ್ಟ ಎಲ್ಲಾ ಪೇಪರ್‌ಗಳನ್ನು ಕಳುಹಿಸಿ ಕೊಡಿ.